# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1341 |
| ಸದಸ್ಯರ ಹೆಸರು | : ಡಾ: ತೇಜಸ್ವಿನಿ ಗೌಡ |
| ಉತ್ತರಿಸುವ ದಿನಾಂಕ | : 21.12.2018 |
| ಉತ್ತರಿಸುವ ಸಚಿವರು | : ಮಾನ್ಯ ಪೌರಾಡಳಿತ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ 'ಕರಾವಳಿ'ಯ ಉದ್ದವೆಷ್ಟು; ಸ್ಥಾಪಿಸಲಾಗಿರುವ ಬಂದರುಗಳೆಷ್ಟು; ಕೇಂದ್ರ/ ರಾಜ್ಯಗಳ ಅನುದಾನ ವಿವರ ನೀಡುವುದು. | ರಾಜ್ಯವು 309 ಕಿ.ಮೀ. ಉದ್ದದ ಕರಾವಳಿ ತೀರವನ್ನು ಹೊಂದಿದೆ. ರಾಜ್ಯದಲ್ಲಿ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಒಂದು ಬೃಹತ್ ಬಂದರು ಮತ್ತು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ 12 ಕಿರು ಬಂದರುಗಳಿರುತ್ತವೆ. ಪ್ರಸಕ್ತ ಸಾಲಿಗೆ ಕಿರು ಬಂದರುಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದಿಂದ ರೂ.52.55 ಕೋಟಿ ಅನುದಾನ ಒದಗಿಸಲಾಗಿದೆ.<br><br>ಕೇಂದ್ರ ಪುರಸ್ಕೃತ ಕೋಸ್ಟಲ್ ಬರ್ತ್ ಯೋಜನೆಯಡಿಯಲ್ಲಿ ರೂ.370.00 ಕೋಟಿ ಮೊತ್ತದ ಪ್ರಸ್ತಾವನೆಗಳಿಗೆ ಮಂಜೂರಾತಿ ದೊರಕಿದ್ದು, ಕೇಂದ್ರ ಸರ್ಕಾರದ ಪಾಲಿನ ರೂ. 117.00 ಕೋಟಿ ಮೊತ್ತದಲ್ಲಿ ರೂ.57.875 ಕೋಟಿ ಅನುದಾನವನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗಿದೆ. |
| ಆ) | ಜಲಸಾರಿಗೆ ಮೂಲಕ ರಾಜ್ಯದೊಳಗೆ ಯಾವ ಯಾವ ರೀತಿಯ ಸರಕು ಸಾಮಗ್ರಿಗಳು ಬಂದಿವೆ/ ಬರುತ್ತಿವೆ; ಪ್ರಮಾಣವೆಷ್ಟು; (ಕಳೆದ 3 ವರ್ಷಗಳಲ್ಲಿ ವಿವರ ನೀಡುವುದು) ಇದರಲ್ಲಿ ವಿದೇಶಗಳಿಂದ ಬಂದಿರುವ ಮರಳಿನ (ಎಂ.ಸ್ಯಾಂಡ್) ಪ್ರಮಾಣವೆಷ್ಟು; ಹೊರಗೆ ಹೋಗುತ್ತಿರುವ ಸರಕುಗಳಾವುವು; ಬಂದರು ಸುರಕ್ಷತೆಗೆ ಕೈಗೊಂಡಿರುವ ಭದ್ರತಾ ಕ್ರಮಗಳಾವುವು; | ರಾಜ್ಯದ 12 ಕಿರು ಬಂದರುಗಳಲ್ಲಿ ಕಾರವಾರ ಮತ್ತು ಹಳೇ ಮಂಗಳೂರು ಬಂದರುಗಳಲ್ಲಿ ಮಾತ್ರ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿವೆ. ಇದರಲ್ಲಿ ಹಳೇ ಮಂಗಳೂರು ಬಂದರಿನಿಂದ ಕೇಂದ್ರಾಡಳಿತ ಪ್ರದೇಶವಾದ ಲಕ್ಷ ದ್ವೀಪ ಆಡಳಿತದ ಅಗತ್ಯಗಳನ್ನು ಪೂರೈಸುವ ಸರಕುಗಳಾದ ಒಣ ಮೀನು, ಸ್ಟೀಲ್, ಸಿಮೆಂಟ್, ಅಕ್ಕಿ, ಗ್ರಾನೈಟ್, ಜೆಲ್ಲಿ, ಎಮ್. ಸ್ಯಾಂಡ್, ಕ್ಲೇ ಬ್ರಿಕ್ಸ್/ಟೈಲ್ಸ್, ತರಕಾರಿ/ಹಣ್ಣು-ಹಂಪಲು, ವಾಹನ, ಟಿಂಬರ್, ಶಿಪ್ ಬ್ಲಾಕ್ಸ್ ಮತ್ತು ದವಸ ಧಾನ್ಯಗಳ ಸಾಗಾಣಿಕೆ ಕಾರ್ಯ ನಡೆಯುತ್ತಿದೆ. ಕಾರವಾರ ಬಂದರಿನಲ್ಲಿ ಮಾತ್ರ ಅಂತರ್‌ರಾಷ್ಟ್ರೀಯ ಹಡಗುಗಳ ಆಗಮನ/ನಿರ್ಗಮನವಿದ್ದು, ಈ ಬಂದರಿನಿಂದ ಪಾಮ್ ಆಯಿಲ್, ಬಿಟುಮಿನ್, ರಾಕ್ ಫಾಸ್ಫೇಟ್, ಕಾಸ್ಟಿಕ್ ಸೋಡಾ ಸೊಲ್ಯೂಷನ್ ಮತ್ತು ಲಿಕ್ವಿಡ್, ಎಚ್.ಎಸ್.ಡಿ, ಇಂಡಸ್ಟ್ರೀಯಲ್ ಸಾಲ್ಟ್, ಮೊಲಾಸೆಸ್ ಮತ್ತು ಕೊಪ್ರಾಮಾಸ್ ಸರಕು ಸಾಮಗ್ರಿಗಳ ಆಮದು/ರಫ್ತು ವಹಿವಾಟು ನಡೆಯುತ್ತಿದೆ.<br><br>ಕಳೆದ 3 ವರ್ಷಗಳಲ್ಲಿ ರಾಜ್ಯದ ಕಿರು ಬಂದರುಗಳಲ್ಲಿ ನಿರ್ವಹಿಸಿದ ಸರಕುಗಳ ಪ್ರಮಾಣವು ಈ ಕೆಳಗಿನಂತಿದೆ: |

| ವರ್ಷ | ಆಮದು | ರಫ್ತು | ಒಟ್ಟು |
|---|---|---|---|
| 2015-16 | 458098 | 377642 | 835740 (M.T.) |
| 2016-17 | 516859 | 190668 | 707527 (M.T.) |
| 2017-18 | 600565 | 80222 | 680787(M.T.) |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಇದರಲ್ಲಿ ರಾಜ್ಯದ ಬಂದರಿಗೆ ವಿದೇಶಗಳಿಂದ M. sand ಸರಕು ಆಮದು ಆಗಿರುವುದಿಲ್ಲ. ರಾಜ್ಯದಿಂದ ವಿದೇಶಕ್ಕೆ ಮೊಲಾಸಸ್ ಸರಕು ಮಾತ್ರ ರಫ್ತಾಗಿರುತ್ತದೆ.<br><br>ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಭದ್ರತಾ ಏಜೆನ್ಸಿಗಳ ಸೂಚನೆಯ ಮೇರೆಗೆ ರಾಜ್ಯದ ಕಿರು ಬಂದರುಗಳಲ್ಲಿ ಭದ್ರತಾ ವ್ಯವಸ್ಥೆಯನ್ನು ಬಲಪಡಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗಿದೆ.<br><br>• ಮೂಲಸೌಕರ್ಯವಿರುವ 9 ಬಂದರುಗಳಲ್ಲಿ CCTV Surveillance System ನ್ನು ಅಳವಡಿಸಲಾಗಿದೆ.<br>• ಬಂದರಿನ ರಕ್ಷಣೆಗಾಗಿ ಆವರಣ ಗೋಡೆ ನಿರ್ಮಾಣ ಮತ್ತು ರಕ್ಷಣಾ ಗೋಡೆಯ ಮೇಲೆ ಫೆನ್ಸಿಂಗ್ ಅಳವಡಿಸಲಾಗಿದೆ.<br>• ಬಂದರುಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಗಮನಿಸಲು ವಾಚ್‌ಟವರ್ ನಿರ್ಮಾಣ ಮಾಡಲಾಗಿದೆ.<br>• ಬಂದರುಗಳಲ್ಲಿ ಹೈಮಾಸ್ಟ್ ಲೈಟ್‌ಗಳನ್ನು ಅಳವಡಿಸಲಾಗಿದೆ.<br>• ವಾಣಿಜ್ಯ ಚಟುವಟಿಕೆಗಳಿರುವ ಕಾರವಾರ ಮತ್ತು ಹಳೇ ಮಂಗಳೂರು ಬಂದರುಗಳ ಭದ್ರತೆಗಾಗಿ ನಿವೃತ್ತ ಯೋಧರನ್ನು ಹೊರಗುತ್ತಿಗೆಯ ಮೇಲೆ ಪಡೆದುಕೊಳ್ಳಲು ಈಗಾಗಲೇ ಟೆಂಡರ್ ಕರೆಯಲಾಗಿದೆ. |
| ಇ) | ಬಂದರುಗಳಲ್ಲಿ ದುಡಿಯುತ್ತಿರುವ ಮೀನುಗಾರರ ಸಂಖ್ಯೆ ಎಷ್ಟು; ಮಹಿಳೆಯರೆಷ್ಟು; ಅವರು ಎದುರಿಸುತ್ತಿರುವ ಸಮಸ್ಯೆಗಳಾವುವು; ಮೊಗವೀರರ ಮತ್ತು ಇತರೆ ಕಾರ್ಮಿಕರಿಗಾಗಿ ಸರ್ಕಾರ ರೂಪಿಸಿರುವ ಕಲ್ಯಾಣ ಕಾರ್ಯಕ್ರಮಗಳೇನು; ಬಂದರುಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡುವುದು; | ರಾಜ್ಯದ ಬಂದರುಗಳಲ್ಲಿ ಸುಮಾರು 70000 ಮೀನುಗಾರರು ದುಡಿಯುತ್ತಿದ್ದಾರೆ. ಇವರಲ್ಲಿ 2100 ಮಹಿಳೆಯರಿರುತ್ತಾರೆ.<br><br>ಮೀನುಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಮೊಗವೀರರ ಮತ್ತು ಇತರೆ ಕಾರ್ಮಿಕರಿಗಾಗಿ ಸರ್ಕಾರ ರೂಪಿಸಿರುವ ಕಲ್ಯಾಣ ಕಾರ್ಯಕ್ರಮಗಳ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.<br><br>ಬಂದರುಗಳಲ್ಲಿ ಅಗತ್ಯಕ್ಕನುಗುಣವಾಗಿ ನಿರ್ವಹಣೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. 2018-19ನೇ ಸಾಲಿನಲ್ಲಿ ಬಂದರುಗಳ ನಿರ್ವಹಣೆ ವೆಚ್ಚಕ್ಕಾಗಿ ಕಲ್ಪಿಸಿರುವ ಅನುದಾನದ ವಿವರವನ್ನು ಅನುಬಂಧ-2 ರಲ್ಲಿ ನೀಡಿದೆ. |
| ಈ) | ಜಲಸಾರಿಗೆಯಲ್ಲಿನ ಸಂಚಾರ ದಟ್ಟಣೆ ಹಾಗೂ ಸಂಚಾರ ವಾಹನಗಳ ನಿರ್ವಹಣೆ ಬಗ್ಗೆ ತಿಳಿಸುವುದು; | ರಾಜ್ಯದ ನೌಕಾಚಟುವಟಿಕೆಗಳು ಇರುವ ಕಾರವಾರ ಮತ್ತು ಹಳೇ ಮಂಗಳೂರು ಬಂದರುಗಳಲ್ಲಿ ಹೆಚ್ಚಿನ ಪ್ರಮಾಣದ ಸರಕು ಸಾಗಾಟಗಳು ಇಲ್ಲದ ಕಾರಣ ಜಲಸಾರಿಗೆಯಲ್ಲಿ ಮತ್ತು ವಾಹನಗಳ ಸಂಚಾರದಲ್ಲಿ ದಟ್ಟಣೆಯಿರುವುದಿಲ್ಲ. |
| ಉ) | ಕಡಲಿನ ಕೊರೆತದ ಹಾನಿ ಎಷ್ಟು; ಪುನರ್ ನಿರ್ಮಾಣದ ಪ್ರಗತಿ ಹಾಗೂ ಕೇಂದ್ರ/ರಾಜ್ಯ | ಕಡಲ ಕೊರೆತ ಸಂಭವಿಸಿ, ಹಾನಿಯಾದ ಭೂಮಿಯ ವಿವರಗಳ ಮಾಹಿತಿ ಮತ್ತು ಇದಕ್ಕೆ ನೀಡುವ ಪರಿಹಾರಗಳ ಕಂದಾಯ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | ಅನುದಾನದ ಬಗ್ಗೆ ತಿಳಿಸುವುದು? | ಇಲಾಖೆಯಿಂದ ನಿರ್ವಹಿಸಲಾಗುತ್ತಿದೆ. ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರವನ್ನು **ಅನುಬಂಧ-3** ರಲ್ಲಿ ನೀಡಿದೆ. ಸಮುದ್ರ ಕೊರೆತ ತಡೆಗೋಡೆ ನಿರ್ಮಿಸಲು ಪ್ರಸಕ್ತ ಸಾಲಿಗೆ ರಾಜ್ಯ ಸರ್ಕಾರದಿಂದ ರೂ.9.86 ಕೋಟಿ ಮತ್ತು ನಿರಂತರ ಕರಾವಳಿ ತೀರ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆ(ಎಡಿಬಿ)<br><br>ಕಾಮಗಾರಿಗಳಿಗೆ ರೂ.200.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಕೇಂದ್ರ ಸರ್ಕಾರದ ಯಾವುದೇ ಯೋಜನೆಗಳು ಇಲ್ಲದಿರುವುದರಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ. |

ಸಂಖ್ಯೆ: ಲೋಇ 119 ಪಿಎಸ್‌ಪಿ 2018

(ರಮೇಶ ಲ. ಜಾರಕಿಹೊಳಿ)
ಪೌರಾಡಳಿತ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

## ಅನುಬಂಧ–1

### ಮೊಗವೀರರ ಮತ್ತು ಇತರೆ ಕಾರ್ಮಿಕರಿಗಾಗಿ ಸರ್ಕಾರ ರೂಪಿಸಿರುವ ಕಲ್ಯಾಣ ಕಾರ್ಯಕ್ರಮ

ಅ) **ಕಡಲ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ:** ಈ ಯೋಜನೆಯಡಿ ಕರಾವಳಿ ಮೀನುಗಾರರಿಂದ ರೂ.1500/– ಗಳನ್ನು ಮೀನುಗಾರಿಕೆ ಅವಧಿಯಲ್ಲಿ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಸರ್ಕಾರ ರೂ.1500/– ಮತ್ತು ರಾಜ್ಯ ಸರ್ಕಾರ ರೂ.1500/– ಸೇರಿಸಿ ಹೀಗೆ ಒಟ್ಟು ರೂ.4500/– ಗಳನ್ನು ಮೀನುಗಾರಿಕೆ ಇಲ್ಲದ 3 ತಿಂಗಳುಗಳಲ್ಲಿ ಪ್ರತಿ ತಿಂಗಳಿಗೆ ರೂ.1500 ರಂತೆ ಪ್ರತಿ ಮೀನುಗಾರರಿಗೆ ನೀಡಲಾಗುವುದು.

ಆ) **ಸಂಕಷ್ಟ ಪರಿಹಾರ ನಿಧಿ:** ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.3.00 ಲಕ್ಷ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1.00 ಲಕ್ಷ ಪರಿಹಾರ ನೀಡಲಾಗುವುದು. ಅಲ್ಲದೆ ಬಲೆಹಾನಿ, ದೋಣಿಹಾನಿ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1.00 ಲಕ್ಷ ಪರಿಹಾರ ನೀಡಲಾಗುವುದು

ಇ) **ಸಾಮೂಹಿಕ ವಿಮಾ ಯೋಜನೆ:** ರಾಜ್ಯದ 2.04 ಲಕ್ಷ ಮೀನುಗಾರರಿಗೆ ಗುಂಪು ವಿಮಾ ಸೌಲಭ್ಯ ಒದಗಿಸಲಾಗಿದೆ. ಈ ಯೋಜನೆಯಡಿ ಮೀನುಗಾರಿಕೆಯಲ್ಲಿ ತೊಡಗಿರುವಾಗ ಆಕಸ್ಮಿಕವಾಗಿ ಮರಣ ಹೊಂದಿದ ಮೀನುಗಾರರ ಅವಲಂಬಿತರಿಗೆ ಹಾಗೂ ಶಾಶ್ವತ ಅಂಗವಿಕಲರಾದ ಮೀನುಗಾರರಿಗೆ ರೂ.2,00,000/– ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1,00,000 ಗಳ ಪರಿಹಾರ ನೀಡಲಾಗುವುದು.

ಈ) **ಮಹಿಳಾ ಮೀನುಗಾರರಿಗೆ ಶೂನ್ಯ ಬಡ್ಡಿಯಲ್ಲಿ ಸಾಲ ವಿತರಣೆ:** ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ ವಾಣಿಜ್ಯ ಬ್ಯಾಂಕ್‌ಗಳ ಮುಖಾಂತರ 50,000 ರೂ.ಗಳವರೆಗೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುತ್ತಿದೆ.

ಉ) **ಮತ್ಸ್ಯಾಶ್ರಯ ಯೋಜನೆ:** ವಸತಿ ರಹಿತ ಮೀನುಗಾರರಿಗೆ ಈ ಯೋಜನೆಯಡಿ ಮನೆ ನಿರ್ಮಾಣಕ್ಕೆ ಸಾಮಾನ್ಯ ಮೀನುಗಾರರಿಗೆ ರೂ.1.20 ಲಕ್ಷ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ರೂ 1.75 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ 2.00 ಲಕ್ಷ ಸಹಾಯಧನ ನೀಡಲಾಗುವುದು

# ಅನುಬಂಧ-2

ಮೀನುಗಾರಿಕೆ ಬಂದರುಗಳ ನಿರ್ವಹಣೆಯನ್ನು ಕೈಗೊಳ್ಳಲು ಅನುವಾಗುವಂತೆ ಬಂದರುವಾರು ಈ ಕೆಳಗಿನಂತೆ ಅನುದಾನವನ್ನು ಕಲ್ಪಿಸಿಕೊಳ್ಳಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಮೀನುಗಾರಿಕೆ ಬಂದರಿನ ಹೆಸರು | ಜಿಲ್ಲೆ | ತಾಲ್ಲೂಕು | ನಿರ್ವಹಣೆಗೆ ಕಲ್ಪಿಸಲಾದ ಅನುದಾನ |
|---|---|---|---|---|
| 1. | ಮಂಗಳೂರು ಮೀನುಗಾರಿಕೆ ಬಂದರಿನ ನಿರ್ವಹಣೆ | ದಕ್ಷಿಣ ಕನ್ನಡ | ಮಂಗಳೂರು | 8.45 |
| 2. | ಮಲ್ಪೆ ಮೀನುಗಾರಿಕೆ ಬಂದರಿನ ನಿರ್ವಹಣೆ | ಉಡುಪಿ | ಉಡುಪಿ | 27.68 |
| 3. | ಗಂಗೊಳ್ಳಿ ಮೀನುಗಾರಿಕೆ ಬಂದರಿನ ನಿರ್ವಹಣೆ | ಉಡುಪಿ | ಕುಂದಾಪುರ | 17.68 |
| 4. | ಹೊನ್ನಾವರ ಮೀನುಗಾರಿಕೆ ಬಂದರಿನ ನಿರ್ವಹಣೆ | ಉತ್ತರ ಕನ್ನಡ | ಭಟ್ಕಳ | 15.10 |
| 5. | ಭಟ್ಕಳ ಮೀನುಗಾರಿಕೆ ಬಂದರಿನ ನಿರ್ವಹಣೆ | ಉತ್ತರ ಕನ್ನಡ | ಭಟ್ಕಳ | 9.32 |
| 6. | ತದಡಿ ಮೀನುಗಾರಿಕೆ ಬಂದರಿನ ನಿರ್ವಹಣೆ | ಉತ್ತರ ಕನ್ನಡ | ಭಟ್ಕಳ | 6.40 |
| 7. | ಆಮದಳ್ಳಿ ಮೀನುಗಾರಿಕೆ ಬಂದರಿನ ನಿರ್ವಹಣೆ | ಉತ್ತರ ಕನ್ನಡ | ಕಾರವಾರ | 1.50 |
| 8. | ಕಾರವಾರ ಮೀನುಗಾರಿಕೆ ಬಂದರಿನ ನಿರ್ವಹಣೆ | ಉತ್ತರ ಕನ್ನಡ | ಕಾರವಾರ | 0.10 |

# ಅನುಬಂಧ-3

## 2018-19ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳ ವಿವರ

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್ ಮೊತ್ತ | ಈವರೆಗಿನ ವೆಚ್ಚ (ರೂ. ಲಕ್ಷಗಳಲ್ಲಿ) | ಕಾಮಗಾರಿಯ ಪ್ರಸ್ತುತ ಹಂತ |
|---|---|---|---|---|---|
| 1 | 2 | 3 | 4 | 5 | 6 |
| 1 | Providing Coastal protective work at Harwada in Ankola tq of U.K dist (Ch.252.230 to 252.530 KM) | 290.00 | 283.31 | 267.15 | ಕಾಮಗಾರಿ ಭೌತಿಕವಾಗಿ ಮುಕ್ತಾಯಗೊಂಡಿದೆ |
| 2 | ಉಡುಪಿ ತಾಲೂಕು ಕಾಪು ವಿಧಾನ ಸಭಾ ಕ್ಷೇತ್ರದ ಪಡುಬಿದ್ರೆ ನಡಿಪಟ್ಣ ಕಡಲ ತೀರದಲ್ಲಿ ಚೈ. 45.000 ರಿಂದ 45.325ಕಿ.ಮೀ ವರೆಗೆ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿ. | 200.00 | 215.23 | - | 186 ಮೀ. ಉದ್ದದ ತಡೆಗೋಡೆ ನಿರ್ಮಾಣ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿ ಪ್ರಗತಿಯಲ್ಲಿದೆ. |
| 3 | ಕುಂದಾಪುರ ತಾಲೂಕು ಗಂಗೊಳ್ಳಿ ಬೇಲಿಕೇರಿ ದಕ್ಷಿಣ ಭಾಗದ ಚೈ. 105.240 ರಿಂದ 105.440ಕಿ.ಮೀ ಹಾಗೂ ಉತ್ತರ ಭಾಗದ ಚೈ.105.520 ರಿಂದ 105.620ಕಿ.ಮೀ ವರೆಗೆ (105.495 ರಿಂದ 105.620ಕಿ.ಮೀ ವರೆಗೆ) ಶಾಶ್ವತ ತಡೆಗೋಡೆ ನಿರ್ಮಾಣ. | 375.00 | 466.10 | 411.65 | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 4 | ಕುಂದಾಪುರ ತಾಲೂಕು ಬೈಂದೂರು ವಿಧಾನ ಸಭಾ ಕ್ಷೇತ್ರದ ಪಡುವರಿ ಪ್ರದೇಶದ ತಾರಾಪತಿ ಶಾಲೆ ಬಳಿ ಚೈ.130.718 ರಿಂದ 130.873ಕಿ.ಮೀ ವರೆಗೆ ಶಾಶ್ವತ ಸಮುದ್ರ ಕೊರೆತ ಪ್ರತಿಬಂಧಕ ತಡೆಗೋಡೆ ನಿರ್ಮಾಣ. | 181.00 | 205.97 | 92.30 | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 5 | ಉಡುಪಿ ತಾಲೂಕು ಕುತ್ಪಾಡಿ ಪಡುಕೆರೆ ಕಡಲ ತೀರದಲ್ಲಿ ಶ್ರೀ. ಸುಂದರಿಯವರ ಮನೆಯಿಂದ ಶ್ರೀ. ಸುಧಾಕರ್ ಸಾಲಿಯಾನ್ ಮನೆ ಬಳಿ ಚೈ: 67.110 ರಿಂದ 67.160 ಕಿ.ಮೀ ವರೆಗೆ ತುರ್ತು ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ (5 ಕಾಮಗಾರಿಗಳು) | 42.00 | 44.06 | 0.00 | ಕಾಮಗಾರಿ ಪ್ರಗತಿಯಲ್ಲಿದೆ |
| 6 | ಮಂಗಳೂರು ತಾಲೂಕು ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಮೀನಕಳಿಯ ಎಂಬಲ್ಲಿ ಸರಪಳಿ 22.955 ಕಿ.ಮೀ. ದಿಂದ 23.275 ಕಿ.ಮೀ. ವರೆಗೆ ದೀರ್ಘಕಾಲಿಕ ತಡೆಗೋಡೆ ನಿರ್ಮಾಣ ಕಾಮಗಾರಿ. | 470.00 | 400.14 | | ಕಾಮಗಾರಿ ಪ್ರಾರಂಭಿಸಬೇಕಾಗಿದೆ. |
| 7 | 2017-18 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ತುರ್ತು ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ ಕಾಮಗಾರಿಗಳು (ಒಟ್ಟು 54 ಕಾಮಗಾರಿಗಳು) | 285.00 | 285.00 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 8 | ಉಡುಪಿ ತಾಲ್ಲೂಕು ಕಾಪು ವಿಧಾನ ಸಭಾ ಕ್ಷೇತ್ರದ ಹೆಜಮಾಡಿ ಬೀಚ್ ಬಳಿ ಶ್ರೀ ವೀರ ಮಾರುತಿ ದೇವಸ್ಥಾನದ ಮುಂಭಾಗದ ಕಡಲ ತೀರದಲ್ಲಿ ಚೈ.44.640 ರಿಂದ 44.968ಕಿ.ಮೀ ವರೆಗೆ ತುರ್ತು ಸಮುದ್ರ ಕೊರೆತ ತಡೆಗೋಡೆ ನಿರ್ಮಾಣ. (41 ಕಾಮಗಾರಿಗಳು) | 199.67 | 199.67 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 9 | ಉಡುಪಿ ತಾಲೂಕು ಕಾಪು ಬಡಾ ಎರ್ಮಾಳ್ ಕಡಲ ತೀರದಲ್ಲಿ ಚೈ.49.785 ರಿಂದ 49.935 ಕಿ.ಮೀ ವರೆಗೆ ತುರ್ತು ಸಮುದ್ರಕೊರೆತ ತಡೆಗೋಡೆ ನಿರ್ಮಾಣ. (19 ಕಾಮಗಾರಿಗಳು) | 85.69 | 85.69 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್ ಮೊತ್ತ | ಈವರೆಗಿನ ವೆಚ್ಚ (ರೂ. ಲಕ್ಷಗಳಲ್ಲಿ) | ಕಾಮಗಾರಿಯ ಪ್ರಸ್ತುತ ಹಂತ |
|---|---|---|---|---|---|
| 1 | 2 | 3 | 4 | 5 | 6 |
| 10 | ಉಡುಪಿ ತಾಲೂಕು ಕುತ್ಪಾಡಿ ಪಡುಕೆರೆ ಕಡಲ ತೀರದಲ್ಲಿ ಚೈ. 65.620 ರಿಂದ 65.790 ಕಿ.ಮೀ ರವರೆಗೆ ಸಮುದ್ರಕೊರೆತ ತಡೆಗೋಡೆ ನಿರ್ಮಾಣ. (17 ಕಾಮಗಾರಿಗಳು) | 84.15 | 84.15 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 11 | ಉಡುಪಿ ತಾಲೂಕು ಕೋಡಿಕನ್ಯಾನ ಕಡಲ ತೀರದಲ್ಲಿ ಚೈ. 85.196 ರಿಂದ 85.206 ಕಿ.ಮೀ ರವರೆಗೆ ಸಮುದ್ರ ಕೊರೆತ ತುರ್ತು ತಡೆಗೋಡೆ ನಿರ್ಮಾ (20 ಕಾಮಗಾರಿಗಳು) | 96.00 | 100.69 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 12 | ಬೈಂದೂರು ವಿಧಾನ ಸಭಾ ಕ್ಷೇತ್ರದ ಶಿರೂರು ಗ್ರಾಮದ ದೊಡ್ಡಹಿತ್ಲು ಕಡಲ ತೀರದದಲ್ಲಿ ಚೈ 132.898 ರಿಂದ 133.010 ಕಿ.ಮೀ ವರೆಗೆ ಸಮುದ್ರ ಕೊರೆತ ತುರ್ತು ತಡೆಗೋಡೆ ನಿರ್ಮಾಣ ಕಾಮಗಾರಿ.(17 ಕಾಮಗಾರಿಗಳು) | 82.79 | 86.75 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 13 | ಬೈಂದೂರು ವಿಧಾನ ಸಭಾ ಕ್ಷೇತ್ರದ ಪಡುವರಿ ಗ್ರಾಮದ ದೊಂಬೆ ಕಡಲ ತೀರದದಲ್ಲಿ ಚೈ 132.055 ರಿಂದ 132.153 ಕಿ.ಮೀ ವರೆಗೆ ಸಮುದ್ರ ಕೊರೆತ ತುರ್ತು ತಡೆಗೋಡೆ ನಿರ್ಮಾಣ ಕಾಮಗಾರಿ.(15 ಕಾಮಗಾರಿಗಳು) | 69.58 | 69.58 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |
| 14 | ಬೈಂದೂರು ವಿಧಾನ ಸಭಾ ಕ್ಷೇತ್ರದ ಕಿರಿಮಂಜೇಶ್ವರ ಗ್ರಾಮದ ಅದ್ರಗೋಳಿ ಕಡಲ ತೀರದದಲ್ಲಿ ಚೈ 120.430 ರಿಂದ 120.530 ಕಿ.ಮೀ ವರೆಗೆ ಸಮುದ್ರ ಕೊರೆತ ತುರ್ತು ತಡೆಗೋಡೆ ನಿರ್ಮಾಣ ಕಾಮಗಾರಿ.(15 ಕಾಮಗಾರಿಗಳು) | 69.58 | 69.58 | - | ಕಾಮಗಾರಿಯ ಪ್ರಗತಿ ಅಂತಿಮ ಹಂತದಲ್ಲಿದೆ. |